ಇ) ಕಾರ್ಖಾನೆಯ ವಿಸ್ತರಣೆ ಹಾಗೂ ಆಧುನೀಕರಣ ಯೋಜನೆಯು 1998ರ ಜೂನ್ ಮಾಹೆಯಲ್ಲಿ ಮುಕ್ತಾಯಗೊಂಡಿದ್ದು, ಯಂತ್ರೋಪಕರಣಗಳ ಸರಬರಾಜುದಾರರಾದ ಮೆ:ಎನ್‌ಹೆಚ್‌ಇಸಿ, ಪುಣೆ, ಇವರಿಂದ ಕರಾರಿನಂತೆ ಪ್ರಾಯೋಗಿಕ ಪರ್‌ಫಾರ್ಮೆನ್ಸ್ ಪಡೆಯಲು ವಿಫಲರಾದ್ದರಿಂದ 1998-99ನೇ ಸಾಲಿನಲ್ಲಿ ಕಬ್ಬು ಅರೆಯುವಿಕೆ ಹಾಗೂ ಸಕ್ಕರೆ ಇಳುವರಿಯಲ್ಲಿ ಗಣನೀಯವಾಗಿ ಇಳಿಮುಖವಾಗಿದ್ದು ಅದೇ ಪ್ರಕ್ರಿಯೆಯು ಮುಂದುವರೆದ ಹಂಗಾಮುಗಳಲ್ಲಿ ಸಹ ಮುಂದುವರೆದಿದ್ದರಿಂದ ಕಾರ್ಖಾನೆಯು ನಷ್ಟ ಹೊಂದಲು ಪ್ರಮುಖ ಕಾರಣವಾಗಿರುವುದು ಕಂಡು ಬರುತ್ತದೆ. ಈ ನಷ್ಟದಲ್ಲಿ ಸುಮಾರು ರೂ. 2984.00 ಲಕ್ಷ ಸವಕಳಿ ನಿಧಿ ತೆಗೆದಿಡಲಾಗಿದೆ. ಇದಲ್ಲದೆ ಸಕ್ಕರೆ ಇಳುವರಿ ಕಡಿಮೆಯಾಗಿ ನಷ್ಟ ಹೊಂದುತ್ತಿದ್ದರೂ ಸಹ ಕಬ್ಬಿನ ಬಿಲ್ಲನ್ನು ನೆರೆ ಹೊರೆಯ ಕಾರ್ಖಾನೆಗಳು ಪಾವತಿಸಿದ ಹೆಚ್ಚಿನ ದರದಲ್ಲಿ ಪಾವತಿಸಲೇಬೇಕಾದ ಅನಿವಾರ್ಯತೆಯ ಹಿನ್ನೆಲೆಯಲ್ಲಿ ಕಾರ್ಖಾನೆಯು ಆರ್ಥಿಕವಾಗಿ ನಷ್ಟ ಹೊಂದಿ ರೈತರಿಗೆ ಕಬ್ಬಿನ ಬಿಲ್ಲು ಪಾವತಿಸುವಲ್ಲಿ ಮತ್ತು ಕಾರ್ಮಿಕರಿಗೆ ಸಂಬಳ ಪಾವತಿಸುವ ವಿಚಾರದಲ್ಲಿ ತೊಂದರೆಯಾಗಿರುತ್ತದೆ.

ಈ) ಆಯಾ ಕಾರ್ಖಾನೆಯ ಮಾಲೀಕ ವರ್ಗವೇ ಇಂತಹ ಪರಿಸ್ಥಿತಿ ನಿಭಾಯಿಸಬೇಕಾಗುತ್ತದೆ. ಆದಾಗ್ಯೂ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಮುಖ್ಯವಾಗಿ ರೈತರಿಗೆ ಪಾವತಿಸಬೇಕಾದ ಕಬ್ಬಿನ ಬಿಲ್ಲು ಬಾಕಿ ಹಾಗೂ ಕಾರ್ಮಿಕ ವೇತನ ಇತ್ಯಾದಿಗಳನ್ನು ಪಾವತಿಸಲು ಸರ್ಕಾರದಿಂದ ರೂ. 10.00 ಕೋಟಿ ಆರ್ಥಿಕ ನೆರವು ಕೋರಿ ಕಾರ್ಖಾನೆಯು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಗಣನೆಗೆ ತೆಗೆದುಕೊಂಡು ಸರ್ಕಾರವು ರೂ. 6.00 ಕೋಟಿ ಮೃದು ಸಾಲವನ್ನು ಮಂಜೂರ್ಮಾಡಿ, ಈ ಹಣವನ್ನು ಈಗಾಗಲೇ ಕಾರ್ಖಾನೆಗೆ ಬಿಡುಗಡೆ ಮಾಡಿರುತ್ತದೆ. ಕಾರ್ಖಾನೆಯು ಈ ಹಣದಿಂದ ರೂ. 568.00 ಲಕ್ಷ ರೈತರ ಕಬ್ಬಿನ ಬಿಲ್ಲನ್ನು ಪಾವತಿಸಿರುತ್ತದೆ. ಹಾಗೂ ರೂ. 32.00 ಲಕ್ಷ ನೌಕರರಿಗೆ ಡಿಸೆಂಬರ್ 2001ರ ಮಾಹೆಯ ವೇತನ ಭತ್ಯೆ ಪಾವತಿಸಿರುತ್ತದೆ. ಇದಲ್ಲದೆ, ಕಾರ್ಖಾನೆಯು 2001-02ನೇ ಸಾಲಿನಲ್ಲಿ ಪಡೆಯಲುದ್ದೇಶಿಸಿರುವ ಸಕ್ಕರೆ ಅಡವಿನ ಸಾಲ ರೂ.35.00 ಕೋಟಿ ನೀಡಬಹುದಾದ ಡಿ.ಸಿ.ಸಿ.ಬ್ಯಾಂಕ್, ಮಂಡ್ಯ: ಮೈಸೂರು:ಶಿವಮೊಗ್ಗ:ಮಂಗಳೂರು ಹಾಗೂ ರಾಜ್ಯ ಅಪೆಕ್ಸ್ ಬ್ಯಾಂಕ್‌ಗಳಿಗೆ ಸರ್ಕಾರವು ಖಾತರಿ ನೀಡಿರುತ್ತವೆ.

ಇನ್ನೂ ಬಾಕಿ ಬಿಡುಗಡೆ ಮಾಡಬೇಕಾದ ರೂ. 4.00 ಕೋಟಿ ಮೃದು ಸಾಲವನ್ನು ಮಂಜೂರ್ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಪಶುಪ್ರಾಥಮಿಕ ಚಿಕಿತ್ಸಾ ಕೇಂದ್ರಗಳು

1293(1517) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಿರಿಯಾಪಟ್ಟಣ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆ.ಆರ್.ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿಗೆ ಸೇರಿದ ಸೋಮನಹಳ್ಳಿ ಗ್ರಾಮದಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಘಟಕವನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಒಂದು ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದೆ.

ಅ) ಹೊಸ ಪಶುವೈದ್ಯಕೀಯ ಸಂಸ್ಥೆಗಳನ್ನು ಮಂಜೂರು ಮಾಡುವ ಕಾರ್ಯಕ್ರಮವಿರುವುದಿಲ್ಲ.

ರಾಜ್ಯದ ಸಣ್ಣ ಕೈಗಾರಿಕೆಗಳ ಸ್ಥಿತಿಗತಿ

1294(1739) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿರುವ ಚಿಕ್ಕ ಉದ್ದಿಮೆಗಳ ಸಂಖ್ಯೆ ಎಷ್ಟು; ವಿವರ ನೀಡುವುದು;ಅದರಲ್ಲಿ ಉತ್ತಮವಾಗಿ ಲಾಭದಾಯಕವಾಗಿ ನಡೆಯುತ್ತಿರುವ ಉದ್ದಿಮೆಗಳ ಸಂಖ್ಯೆ ಎಷ್ಟು; ಮಾಹಿತಿ ನೀಡುವುದು?

ಆ) ಪ್ರತಿಯೊಂದು ಜಿಲ್ಲೆಯಲ್ಲಿ ಯಾವ ಚಿಕ್ಕ ಉದ್ದಿಮೆಗಳಿಗೆ ಆದ್ಯತೆ ನೀಡಿ ಅಬಿವೃದ್ಧಿಪಡಿಸುವ ಅವಕಾಶ ಇರುವುದನ್ನು ಸರ್ಕಾರ ಗುರ್ತಿಸಿದೆಯೇ?

ಇ) ಚಿಕ್ಕ ಉದ್ದಿಮೆಗಳು ಅಭಿವೃದ್ಧಿಯಾಗಲು ಯಾವುದಾದರೂ ಹೊಸ ಯೋಜನೆಗಳನ್ನು ರೂಪಿಸಲಾಗಿದೆಯೇ: ಅವುಗಳ ವಿವರ ನೀಡುವುದು?

ಈ) ಮುಂಬರುವ ವರ್ಷಗಳಲ್ಲಿ ಪ್ರಪಂಚದ ಎಲ್ಲಾ ರಾಷ್ಟ್ರಗಳ ಜೊತೆಗೆ ಪೈಪೋಟಿ ಮಾಡಲು ರಾಜ್ಯ ಯುವಶಕ್ತಿ ಹಾಗೂ ಯುವ ಪ್ರತಿಬೆಗಳಿಗೆ ಸೇವಾ ಅವಕಾಶದ ಯೋಜನೆಗಳನ್ನು ರೂಪಿಸಿರುವ ವಿವರ ನೀಡುವುದು?

ಶ್ರೀ ಆರ್.ರೋಷನ್ ಬೇಗ್(ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ಹಜ್ ಸಚಿವರು):

ಅ) ದಿನಾಂಕ: 30--06-2002ರಲ್ಲಿದ್ದಂತೆ ಇರುವ ಸಣ್ಣ ಕೈಗಾರಿಕೆಗಳು 2,88,700. ಜಿಲ್ಲಾವಾರು ಕೈಗಾರಿಕೆಗಳ ಪಟ್ಟಿಲಗತ್ತಿಸಲಾಗಿದೆ. ಲಾಭದಾಯಕವಾಗಿ ನಡೆಯುತ್ತಿರುವ ಉದ್ದಿಮೆಗಳ ಬಗ್ಗೆ ವಿವರಗಳು ಲಭ್ಯವಿರುವುದಿಲ್ಲ.

ಆ) ಜಿಲ್ಲೆಗಳಲ್ಲಿ ಮುಂದಿನ ಯೋಜನೆ (ಪ್ರಾಸ್ಪೆಕ್ಟೀವ್ ಪ್ಲಾನ್) ತಯಾರಿಸಿ ಜಿಲ್ಲೆಯಲ್ಲಿ ಬರುವ ಕೈಗಾರಿಕೆಗಳನ್ನು ಗುರುತಿಸಲಾಗಿದೆ. ಅವುಗಳಿಗೆ ಕೈಗಾರಿಕಾ ನೀತಿಯಂತೆ ಉತ್ತೇಜನವನ್ನು ಕೊಡಲಾಗುತ್ತಿದೆ.

ಇ) ರಾಜ್ಯದ ಕೈಗಾರಿಕಾ ನೀತಿ 2001-06ರಲ್ಲಿ ರಾಜ್ಯದ ಕೈಗಾರಿಕೆಗಳ ಸರ್ವತೋಮುಖ ಬೆಳವಣಿಗೆಗಾಗಿ ಅನೇಕ ಯೋಜನೆಗಳನ್ನು ರೂಪಿಸಲಾಗಿದೆ. ವಿವರಗಳು ಕೆಳಕಂಡಂತಿವೆ;

1) ತಂತ್ರಜ್ಞಾನ ಉನ್ನತೀಕರಣ
2) ಗುಣಮಟ್ಟ ಉನ್ನತೀಕರಣ
3) ಮೂಲಭೂತ ಸೌಕರ್ಯ ನಿಧಿ
4) ವ್ಯವಹಾರ ಪರಿಸರದ ಅನಿಯಂತ್ರಣ
5) ಸಣ್ಣ ಕೈಗಾರಿಕಾ ಕ್ಷೇತ್ರಕ್ಕೆ ಮಾರಾಟ ಸಹಾಯ
6) ಐಎಸ್ಒ-9000, ಐಎಸ್ಒ-14000 ಪ್ರಮಾಣ ಪತ್ರ ಪಡೆದ ಘಟಕಗಳಿಗೆ ಉತ್ತೇಜನ ನೀಡುವುದು.
7) ಡಬ್ಲ್ಯು.ಟಿ.ಒ ರೀಲೇ ಕೇಂದ್ರ-ಇದರಲ್ಲಿ ಕೈಗಾರಿಕಾ ಉದ್ಯಮಿಗಳಿಗೆ ಈ ಒಪ್ಪಂದದಿಂದ ಆಗಿರುವ ತೊಂದರೆಗಳ ಬಗ್ಗೆ ಹಾಗೂ ಇತರೆ ವಿಷಯಗಳ ಬಗ್ಗೆ ಮಾಹಿತಿಗಳನ್ನು ನೀಡುವುದು.

ಈ) ಮೇಲೆ ಉತ್ತರಿಸಿದೆ.